# 10. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಸೂಡಿ ಫಾರಂ

♦ ಶಾಲಾ ಪರಿಚಯ:–







ಮಲೆನಾಡಿನ ಹೆಬ್ಬಾಗಿಲು ಎಂದು ಹೆಸರು ವಾಸಿಯಾದ ಶಿವಮೊಗ್ಗ ನಗರದಿಂದ ಸುಮಾರು 12 ಕಿ.ಮೀ ರಸ್ತೆಯ ಇಕ್ಕೆಲಗಳಲ್ಲಿಯೂ ತೋಟ ಗದ್ದೆಗಳ ಹಚ್ಚ ಹಸಿರಿನ ಮಾರ್ಗದಲ್ಲಿರುವ ಹಳ್ಳಿ, ಕನ್ನಡ ನಾಡಿನ ಕನ್ನಡ ಭಾಷೆಯೇ ಮಾತೃಭಾಷೆಯಾಗಿರುವ ಸುತ್ತಮುತ್ತಲ ಹಳ್ಳಿಗಳ ನಡುವೆ ವಿಭಿನ್ನವೆಂಬಂತೆ ತಮಿಳು ಜನರು ಉದ್ಯೋಗ ನಿಮಿತ್ತ ಕಟ್ಟಿಕೊಂಡ ಚಿಕ್ಕ ತಮಿಳು ನಾಡೇ ಎಂಬ ವಾತಾವರಣ ಹೊಂದಿರುವ ಎಲ್ಲೆಲ್ಲೂ ತಮಿಳು ಮಾತೇ ತಾಯ್ನುಡಿಯಾಗಿರುವ ಗ್ರಾಮವೇ ನಮ್ಮ ಹಸೂಡಿಫಾರಂ.

**"ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ**
**ನಾನೇನು ಹುಲುಕಡ್ಡಿ ಎಂಬ ನುಡಿಬೇಡ**
**ಹೀನಮಾವುದು ಇಲ್ಲ ಜಗದಲೊಳಿಗದಿ"**

ಎಂಬ ಮಂಕುತಿಮ್ಮನ ಕಗ್ಗದ ನುಡಿಯಂತೆ ಉದ್ಯೋಗವನ್ನರಿಸಿ, ಜೀವನ ನಡೆಸಲು ಬಂದ ತಮಿಳು ಜನರು ಶ್ರಮಜೀವಿಗಳು, ಸದ್ಹೃದಯಿಗಳು, ಕರುಣಾಮಯಿಗಳು, ಉದಾರಿಗಳು ಆದರೆ " education is the key to succe" ಎಂಬಂತೆ ಅವರ ಯಾಶಸ್ಸಿಗೆ ಶಿಕ್ಷಣದ ಅವಶ್ಯಕತೆ ಬಹಳ ಬೇಕಾಗಿದೆ.
ಅಂತಹ ಯಶಸ್ವಿ ಶಿಕ್ಷಣವನ್ನು ಒದಗಿಸುವಲ್ಲಿ ಸ. ಹಿ ಪ್ರಾ ಶಾಲೆಯ ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರ ಪಾತ್ರ ಅವಿಸ್ಮರಣೀಯವಾದುದು.

♦ ಶಾಲಾ ಸೌಲಭ್ಯಗಳು

ಜನಪ್ರತಿನಿಧಿಗಳು, ಇಲಾಖೆ, ಶಾಲಾ ಅಭಿವೃದ್ಧಿ ಸಮಿತಿ, ದಾನಿಗಳು, ಶಿಕ್ಷಕವೃಂದ, ಪೋಷಕರು, ಸಮಸ್ತ ಗ್ರಾಮಸ್ಥರು ಹಾಗೂ ಗ್ರಾಮದ ಪ್ರಮುಖ ಶಿಕ್ಷಣಾಸಕ್ತರುಗಳ ಫಲವಾಗಿ ಈ ಶಾಲೆಯು ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ.

ಶುದ್ಧ ಕುಡಿಯುವ ನೀರಿನ ಘಟಕ.




ಧ್ವನಿವರ್ಧಕ ವ್ಯವಸ್ಥೆ.




ಮಕ್ಕಳಿಗೆ ಕೈ ತೊಳೆಯುವ ವ್ಯವಸ್ಥೆ ಮಾಡಲಾಗಿದೆ.




ಕ್ರೀಡಾ ಪರಿಕರಗಳು.



ಗ್ರಂಥಾಲಯ ಸೌಲಭ್ಯ.






ಕಂಪ್ಯೂಟರ್ ಆಧಾರಿತ ಶಿಕ್ಷಣ.







ನಲಿ–ಕಲಿ ಮತ್ತು ಇತರೆ ಮಕ್ಕಳಿಗೆ ಟೇಬಲ್ ಛೇರ್ ವ್ಯವಸ್ಥೆ.







ಟೈಲರಿಂಗ್ ಮಿಷನ್ ಇದ್ದು ಮಕ್ಕಳ ಹರಿದ ಸಮವಸ್ತ್ರ ಹೊಲಿದು ಕೊಡುವ ವ್ಯವಸ್ಥೆ.






2. ರ್‍ಯಾಂಪ್ಸ್.
3. ಪ್ರತಿ ತರಗತಿಗೂ ಫೆನಲ್ ಬೋರ್ಡ್ ಹೊಂದಿದೆ.
4. ಎಲ್ಲಾ ಕೊಠಡಿಗಳಿಗೂ ವಿದ್ಯುತ್ ಹಾಗೂ ಫ್ಯಾನ್ ಸೌಲಭ್ಯಗಳ ವ್ಯವಸ್ಥೆ ಒದಗಿಸಿದೆ. ದಿನಂಪ್ರತಿ ಮಕ್ಕಳಿಂದ ಪ್ರಾರ್ಥನಾ ಸಮಯದಲ್ಲಿ ಭಗವದ್ಗೀತೆ ವಾರ್ತಾಪತ್ರಿಕೆ, ಪಂಚಾಂಗ, ರಸಪ್ರಶ್ನೆ, ಪುಸ್ತಕ ಪರಿಚಯ, ಶುಭಾಷಿತ, ಹೀಗೆ ಹತ್ತು ಹಲವಾರು ಮಾಹಿತಿಗಳನ್ನು ನೀಡಲಾಗುತ್ತಿದೆ.
5. ತರಗತಿಗೊಂದು ಒದುವ ಮೂಲೆಯ ಸೌಲಭ್ಯ ಒದಗಿಸಿದೆ.
6. ದಾನಿಗಳಿಂದ ನೋಟ್‌ಪುಸ್ತಕ, ಶಾಲಾ ಬ್ಯಾಗಗಳ ಕೊಡುಗೆ
7. ಶಿಕ್ಷಕರಿಂದ ಕಲಿಕೋಪರಣಗಳ ತಯಾರಿಕೆ ಮತ್ತು ಬಳಕೆ.
8. ಪ್ರತಿಭಾ ಕಾರಂಜಿಗಳಲ್ಲಿ ಭಾಗವಹಿಸುವಿಕೆ.
9. ಪಠ್ಯಕ್ಕೆ ಪೂರಕವಾದ ಗೋಡೆಬರಹಗಳ ಮಾಹಿತಿ.
10. ಪ್ರೇರಣಾ – ಸಾಮರ್ಥ್ಯ ಗಳಿಸಿದ ಮಕ್ಕಳನ್ನು ಉತ್ತೇಜಿಸುವ ಸಲುವಾಗಿ "ಸ್ಟಾರ್" ವ್ಯವಸ್ಥೆ.
11. ಮಕ್ಕಳಿಗಾಗಿ ಚರ್ಚಾಸ್ಪರ್ಧೆ, ವಿಚಾರ ಸಂಕೀರ್ಣ, ರಸಪ್ರಶ್ನೆ,-- ಕಾರ್ಯಕ್ರಮಗಳ ಆಯೋಜನೆ.

## ಇಲಾಖೆ ಮತ್ತು ಇಲಾಖೇತರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವುದು.

1. ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ಪೋಷಕರು ಭಾಗವಹಿಸಿರುವುದು.





**ಜಾಥಾ** **ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆ ಕಾರ್ಯ**





1. ಸುಬ್ಬಯ್ಯ ಹೆಲ್ತ್ ಕೇರ್ ದಂತ ವೈದ್ಯರಿಂದ ಮಕ್ಕಳಿಗೆ ಹಲ್ಲುಗಳ ಆರೋಗ್ಯದ ಬಗ್ಗೆ ಮಕ್ಕಳಿಗೆ ಮಾಹಿತಿ.
2. ಜೆ ಎನ್ ಎನ್ ಸಿ ಇ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರ
3. ನಲಿ–ಕಲಿ ತರಗತಿಯ ಗುಣಮಟ್ಟ ಅರ್ದಯಯನದ ಮೈಕ್ರೋ ಅಧ್ಯಯನ ತಂಡ
4. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಚೆಕ್ ವಿತರಣೆ ಮಾಡುತ್ತಿರುವುದು.
5. ಪ್ರತೀ ಶನಿವಾರದ ಸಾಮೂಹಿಕ ಕವಾಯತು.
6. ರಾಷ್ಟ್ರೀಯ ಸ್ವಚ್ಚತಾ ಅಭಿಯಾನದ ಅರಿವು ಮೂಡಿಸುವ ಜಾಥಾ




7. ಇಂಗ್ಲೀಷ್ ಭೋಧನಾ ತರಗತಿಯಲ್ಲಿ ಶಿಕ್ಷಕರು ಮತ್ತು ಮಕ್ಕಳ ಭಾಗವಹಿಸುವಿಕೆ







8. ಸ್ವಾತಂತ್ರ ದಿನಾಚರಣೆಯ ಕಾರ್ಯಕ್ರಮ



9. ನಮ್ಮ ಶಾಲೆಯ ಚಿಣ್ಣರ ಚಿಗುರು ಮಾಸ ಪತ್ರಿಕೆ







10. ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆ ಶಾಲಾ ಸಿಬ್ಬಂದಿ ಮತ್ತು ಮಕ್ಕಳು ಪಾಲ್ಗೊಂಡಿರುವುದು.







ಗುಣಾತ್ಮಕ ಶಿಕ್ಷಣವನ್ನು ನೆಡುವ ಆಶಯದೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಂದಿರು ಜನ ಪ್ರತಿನಿಧಿಗಳು ಇಲಾಖಾ ಅಧಿಕಾರಿಗಳು ಸಂಘ ಸಂಸ್ಥೆಗಳು ಸಮುದಾಯ ಗ್ರಾಮ ಪಂಚಾಯಿತಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳು ಆರೋಗ್ಯ ಇಲಾಳೆ ಅಂಗನವಾಡಿ ಎಸ್.ಡಿ.ಎಂ.ಸಿ ಕೇವಲ ಕಾಮಗಾರಿಯಲ್ಲದೇ ಉತ್ತಮ ಕಲಿಕೆಯನ್ನು ಸಾಧಿಸಲು ಸಮುದಾಯ ಇಲಾಖೆಯೊಂದಿಗೆ ಉತ್ತಮ ಸಂಪರ್ಕದಿಂದ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಶಾಲೆಯನ್ನು ಗುಣಾತ್ಮಕ ಕೇಂದ್ರವಾಗಿ ಮಾಡುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎನ್ನುತ್ತಾ ನಮ್ಮ ಸ.ಹಿ.ಪ್ರಾ ಹಸೂಡಿಫಾರಂ ಶಾಲೆಯ ಯಶೋಗಾಥೆಯನ್ನು ತಮ್ಮ ಮುಂದಿಡಲು ಅವಕಾಶ ನೀಡಿದ ಇಲಾಖೆಗೆ ಧನ್ಯವಾದಗಳು